# ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ (ವಿನಿವಿಂಕ್)

5ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560001

ದೂರವಾಣಿ ಸಂಖ್ಯೆ: 080 – 27622037, 22864260 ಇ–ಮೇಲ್: acdbpsubdiv@gmail.com


ಸಂಖ್ಯೆ: NGR/CR/01/2023-24 | **ಸಾರ್ವಜನಿಕ ಪ್ರಕಟಣೆ** | ದಿನಾಂಕ: 04–01–2024

**M/s. N.G.R. Enterprise Chit Funds Private Limited, Hoskote** ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ, 2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ 2004 ರ ಕಲಂ 5(1) ರ ಅನ್ವಯ ಉಪ ವಿಭಾಗಾಧಿಕಾರಿ ದೊಡ್ಡಬಳ್ಳಾಪುರ ಉಪವಿಭಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು **M/s. N.G.R. Enterprise Chit Funds Private Limited, Hoskote** ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು **ಉಪ ವಿಭಾಗಾಧಿಕಾರಿ ದೊಡ್ಡಬಳ್ಳಾಪುರ ಉಪ ವಿಭಾಗ ಮತ್ತು ಸಕ್ಷಮ ಪ್ರಾಧಿಕಾರಿಗಳು, ವಿನಿವಿಂಕ್, 5ನೇ ಮಹಡಿ, ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು** ರವರ ಕಛೇರಿಯಲ್ಲಿ ವಿತರಿಸಲಾಗುವುದು ಹಾಗೂ ಠೇವಣಿದಾರರು / ಅಧಿಕೃತ ಪ್ರತಿನಿಧಿ / ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ / ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: **08–01–2024 ದಿಂದ** ಒಂದು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಸದರಿ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ: **07–02–2024 ರಂದು ಸಂಜೆ 5.30 ರೊಳಗಾಗಿ** ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು / ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

| ಕ್ರ. ಸಂ | ಠೇವಣಿದಾರರು / ಠೇವಣಿದಾರರ ಸಂಬಂಧಿಕರು | ಸಲ್ಲಿಸಬೇಕಾಗಿರುವ ದಾಖಲೆಗಳು |
|---|---|---|
| 1 | ಠೇವಣಿದಾರರು (Depositors) | ಠೇವಣಿದಾರರು ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿ / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 2 | ನಾಮಿನಿದಾರರು (Nominee) | 1) ಠೇವಣಿದಾರರ ಮರಣ ಪ್ರಮಾಣ ಪತ್ರ,<br>2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು).<br>3) ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 3 | ವಾರಸುದಾರರು (Legal heirs) | 1) ಠೇವಣಿದಾರರ ಮರಣ ಪ್ರಮಾಣ ಪತ್ರ.<br>2) ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು).<br>3) ನಿರ್ದಿಷ್ಟನಾಮಿನಿ **(Nominee)** ರವರ ಮರಣ ಪ್ರಮಾಣ ಪತ್ರ.<br>4) ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ.<br>5) ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು.<br>6) ಉಳಿದ ವಾರಸುದಾರರ ಒಪ್ಪಿಗೆ *(Consent from other legal heirs).* |
| 4 | PoA - (Power of Attorney) | 1) ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು.<br>2) ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card + Passport.<br>3) ಮೇಲಿನ ಕ್ರ.ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney certificate ಸಲ್ಲಿಸತಕ್ಕದ್ದು.<br>4) **PoA.** ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 5 | ಅಪ್ರಾಪ್ತರ ಗಾರ್ಡಿಯನ್ (ಪೋಷಕರು) | 1) ಠೇವಣಿದಾರರ ಮರಣ ಪತ್ರ. 2) ಗಾರ್ಡಿಯನ್ ನೇಮಕದ ದಾಖಲೆ.<br>3) ಸ್ವಯಂ ದೃಢೀಕೃತ ದಾಖಲೆ. |

**ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.**

| ಕ್ರ. ಸಂ | ಠೇವಣಿದಾರರು / ಠೇವಣಿದಾರರ ಸಂಬಂಧಿಕರು | ಸಲ್ಲಿಸಬೇಕಾಗಿರುವ ದಾಖಲೆಗಳು |
|---|---|---|
| 1 | ಉಳಿತಾಯ ಠೇವಣಿ (Savings Deposit) | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) ಉಳಿತಾಯ ಠೇವಣಿ ಪಾಸ್ ಪುಸ್ತಕ.<br>3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount)<br>* ಠೇವಣಿದಾರರು / ನಾಮಿನಿದಾರರು / ವಾರಸುದಾರರು / **PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 2 | ನಿಶ್ಚಿತ ಠೇವಣಿ (Fixed Deposit) | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) ಬಾಂಡ್ ಪ್ರಮಾಣ ಪತ್ರ / ನಿಶ್ಚಿತ ಠೇವಣಿ ಪ್ರಮಾಣ ಪತ್ರ / ಇತರೆ.<br>3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount)<br>* ಠೇವಣಿದಾರರು / ನಾಮಿನಿದಾರರು / ವಾರಸುದಾರರು / **PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 3 | ಸಂಚಿತ ಠೇವಣಿ (Cumulative Deposit) | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) ಸಂಚಿತ ಠೇವಣಿ ಪ್ರಮಾಣ ಪತ್ರ.<br>3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount)<br>* ಠೇವಣಿದಾರರು / ನಾಮಿನಿದಾರರು / ವಾರಸುದಾರರು / **PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 4 | ಆವರ್ತ ಠೇವಣಿ (Recurring Deposit) | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) ಆವರ್ತಠೇವಣಿ ಠೇವಣಿ ಪಾಸ್ ಪುಸ್ತಕ.<br>3) ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount)<br>* ಠೇವಣಿದಾರರು / ನಾಮಿನಿದಾರರು / ವಾರಸುದಾರರು / **PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ಧೃಢೀಕರಿಸಿ ಸಲ್ಲಿಸತಕ್ಕದ್ದು. |
| 5 | ಪೂರಕ ದಾಖಲೆಗಳು (Supporting Documents) | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ (Cancelled Cheque leaf)<br>* ಠೇವಣಿದಾರರು / ನಾಮಿನಿದಾರರು / ವಾರಸುದಾರರು / **PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ / ಪತ್ರಾಂಕಿತ ಅಧಿಕಾರಿಗಳು / ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 6 | ಮೂಲ ಬಾಂಡ್ / ಇತರೆ ಪಡೆದು ಬದಲಿ ನೀಡಿದ ದಾಖಲೆಗಳು | 1) ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2) 3) |

- ಮೇಲಿನ ಕ್ರಮ ಸಂಖ್ಯೆ 1 ರಿಂದ 6ರಲ್ಲಿ ತಿಳಿಸಿರುವ 'ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು' ಅಂದರೆ M/s. N.G.R. Enterprise Chit Funds Private Limited, Hoskote ಸಂಸ್ಥೆಯಲ್ಲಿ ಹೂಡಿಕೆ ಉದ್ದೇಶಕ್ಕಾಗಿ ಯಾವ ಬ್ಯಾಂಕಿನಿಂದ ಹಣ ವರ್ಗಾವಣೆ ಮಾಡಲಾಗಿದೆಯೋ ಆ ಬ್ಯಾಂಕಿನ ಪಾಸ್ ಪುಸ್ತಕ.
- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು.
- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ ಅಂದರೆ ದಿನಾಂಕ: **08–01–2024 ರಿಂದ 07–02–2024 ರೊಳಗಾಗಿ, ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30 ರವರೆಗೆ** ಮಾತ್ರ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.
- ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು **ಉಪ ವಿಭಾಗಾಧಿಕಾರಿ ದೊಡ್ಡಬಳ್ಳಾಪುರ ಉಪವಿಭಾಗ ಮತ್ತು ಸಕ್ಷಮ ಪ್ರಾಧಿಕಾರಿಗಳು,** ವಿನಿವಿಂಕ್, 5ನೇ ಮಹಡಿ, ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು ಕಛೇರಿಗೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ ಅಲ್ಲದೇ ವೆಬ್‌ಸೈಟ್: **https://sploca.karnataka.gov.in** ನಿಂದ ಮಾಹಿತಿಯನ್ನು ಪಡೆಯುವುದು. ದೂರವಾಣಿ: **080 – 27622037, 22864260, ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ** ಸಂಪರ್ಕಿಸಲು ಸೂಚಿಸಿದೆ.
- ಠೇವಣಿದಾರರು / ಅಧಿಕೃತ ಪ್ರತಿನಿಧಿ, / ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಪಬ್ಲಿಕ್ ಭಾವಚಿತ್ರ ಹೊಂದಿರುವ ಗುರ್ತಿನ ಚೀಟಿ / ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ / ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿದ್ದಲ್ಲಿ ಕ್ಲೇಮ್ ಅರ್ಜಿಗಳನ್ನು ವಿತರಿಸಲಾಗುವುದು. ಠೇವಣಿದಾರರು ಅಥವಾ ನಾಮಿನಿದಾರರು ಅಥವಾ PoA ಹೊಂದಿರುವವರು ಮಾತ್ರ ಖುದ್ದಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿದಾರರು M/s. N.G.R. Enterprise Chit Funds Private Limited, Hoskote ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**ಸಹಿ/–**

**ಸಕ್ಷಮ ಪ್ರಾಧಿಕಾರ**

**ಮೆ॥ ಎನ್.ಜಿ.ಆರ್. ಎಂಟರ್‌ಪ್ರೈಸಸ್ ಚಿಟ್‌ಫಂಡ್ಸ್ ಪ್ರೈವೇಟ್ ಲಿಮಿಟೆಡ್,**

**(ಹೊಸಕೋಟೆ) ಬೆಂಗಳೂರು.**

ವಾಸಾಸಂಇ/ವಾ.ಪ್ರ/2875/2023–24

Size: 16x40cm